Registered Number M. 1299. SATYAVADI (Founded 1917) Every Evening

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂಪುಟ 28 ಸಂಚಿಕೆ 293] ಶುಕ್ರವಾರ 24—8—45 [3 ಪೈ

ಏರ್ ಮಾರ್ಷಲ್ ಎ. ಡಂಡ್ಲೆಟ್

ರೂಸ್ವೆಲ್ಟ್ ಪ್ರತಿಮೆಗೆ ಸ್ಥಳವಿಲ್ಲ

ಪ್ರೆಸಿಡೆಂಟ್ ರೂಸ್ವೆಲ್ಟರ ಪ್ರತಿಮೆ ಎಲ್ಲಿ ಇಡಬೇಕೆಂಬ ಚರ್ಚೆಯಾಯಿತು. ಸದಸ್ಯರುಗಳು ನಾನಾ ಭಾಗಗಳಲ್ಲಿ ಇಡಲು ಸಲಹೆ ಕೊಟ್ಟರು. ಆ ಸಲಹೆಗ ಳೇನೂ ಪ್ರಯೋಜನವಾಗಲಿಲ್ಲ.

ವಾಷಿಂಗ್ಟನ್ ಪ್ರತಿಮೆಯ ಪಕ್ಕದಲ್ಲಿ ರೂಸ್ವೆಲ್ಟರ ಪ್ರತಿಮೆಯನ್ನಿಡಿರೆಂದು ಸದಸ್ಯರೊಬ್ಬರು ಸೂಚಿಸಿದರು.

ಸೂಚನೆ ವ್ಯರ್ಥವಾಯಿತು. ವಾಷಿಂಗ್ಟನ್ ಸಳ್ಳನ್ನು ಎಂದಿಗೂ ಹೇಳಿದವನಲ್ಲ. ಆದುದರಿಂದ ಅವನ ಪಕ್ಕದಲ್ಲಿ ರೂಸ್ವೆಲ್ಟ್ ಪ್ರತಿಮೆ ಇಡಕೂಡದೆಂದು ತೀರ್ಮಾನಿಸಿದರು.

ಅಬ್ರಹಾಂ ಲಿಂಕನ್ ಪಕ್ಕದಲ್ಲಿ ರೂಸ್ವೆಲ್ಟ್ ಪ್ರತಿಮೆ ಸ್ಥಾಪಿಸಿರೆಂದು ಮತ್ತೊಬ್ಬ ಸದಸ್ಯರು ಸೂಚಿಸಿದರು.

ಲಿಂಕನ್ ಮಹಾ ಸತ್ಯಸಂಧನು. ಆತನ ಪಕ್ಕದಲ್ಲಿ ರೂಸ್ವೆಲ್ಟ್ ಪ್ರತಿಮೆ ಬೇಡವೆಂದು ಸದಸ್ಯರೆಲ್ಲರೂ ಒಪ್ಪಿದರು.

ಪ್ರತಿಭಟನೆ

ಇಂಗ್ಲೆಂಡಿನ ಸೆಂಟ್ ಅಲ್ಬ್ಯಾನ್ಸಿನ ದೀನರಾಪ ರೆವರೆಂಡ್ ಸಿ. ಸಿ. ಥಿಕ್ನೆಸ್ಸೆ ತನ್ನ ಚರ್ಚಿನಲ್ಲಿ ಜಸ್ಟಾಪೊ ವೇಲಿನ ವಿಜಯಕ್ಕಾಗಿ ಪ್ರಾರ್ಥನೆ ನಡೆಸಲು ಒಪ್ಪಲಿಲ್ಲ. ಅಣು ಬಾಂಬ್ ಉಪಯೋಗಿಸಿದ್ದಕ್ಕಾಗಿ ಅವರ ನಿಷೇಧವಿದೆ. ಅನ್ಯಾಯವಾಗಿ ಶಕ್ತಿಯನ್ನು ಪಯೋಗಿಸಿ ಪಡೆದ ವಿಜಯ ಲಾಭಕ್ಕಾಗಿ ನಾನು ದೇವರಿಗೆ ಪ್ರಾಮಾಣೀಕವಾಗಿ ವಂದನೆಗಳನ್ನರ್ಪಿಸಲಾರೆ ಎಂದಿರುವರು.

ಂ ಂ

ಬರ್ಮಾದಲ್ಲಿ ಕೊನೆಯ ವರೆಗೂ ಜಪಾನರ ಪ್ರತಿಭಟನೆ

ರಂಗೂನ್— ಸಿತ್ತಾಂಗ್ ಪ್ರಾಂತ್ಯದಲ್ಲಿ ಕೈಸೆರೆ ಸಿಕ್ಕಿದ ಜಪಾನಿಗಳ ಪೈಕಿ ಕೆಲವರು ಮಾತ್ರ ತಾವಾಗಿ ಶರಣಾಗತರಾದರು. ಪೆಗು ಯೋಮಾ ಮತ್ತು ಸಿತ್ತಾಂಗ್ ಕಣಿವೆಗಳಲ್ಲಿ ಮೇ 28 ರಿಂದ ಆಗಸ್ಟ್ 13 ರವರಿಗೆ 20222 ಶತ್ರುಗಳಿಗೆ ಶಾವು ನೋವುಗಳಾದವು: 1344 ಮಂದಿ ಕೈ ಸೆರೆ ಸಿಕ್ಕಿದರು. ಅಂತಿಮ ಘಟ್ಟ ಕದನದಲ್ಲಿ ಸೆರೆ ಸಿಕ್ಕಿದ 280 ಖೈದಿಗಳ ಪೈಕಿ 20 ಮಂದಿ ಮಾತ್ರ ತಾವಾಗಿ ಶರಣಾದರು. 60 ಮಂದಿ ತಮ್ಮಲ್ಲಿದ್ದ ಕಾಗದ ಪತ್ರಗಳನ್ನು ವಿಮ್ರರ ವಶಕ್ಕೊಪ್ಪಿಸಿದರು.

ರೂಸ್ವೆಲ್ಟ್ ಪ್ರತಿಮೆಯನ್ನು ಕೊಲಂಬಸ್ ಪ್ರತಿಮೆಯ ಪಕ್ಕದಲ್ಲಿಡಬೇಕೆಂದು ಸದಸ್ಯರೊಬ್ಬರು ಸೂಚನೆಗೆ ಸಭೆಯೇ ಎದ ರು ಬಿದ್ದಿತು. ' ಕೊಲಂಬಸ್' ಪ್ರಯಾಣದ ವಿಷಯದಲ್ಲಿ, ಅವನಿಗೇ ನಂಬಿಕೆ ಇರಲಿಲ್ಲ ಅವನು ಕಡು ಬಡವನು. ಸಾಲದಲ್ಲಿಯೇ ಅವನು ಮುಳುಗೆದ್ದಿದ್ದನು. ಆದುದರಿಂದ ಅವನ ಪಕ್ಕದಲ್ಲಿ ಕೂಡದು ' ಎಂದರು.

ಬೋಸ್ ಕಣ್ಮರೆಯಾದರೇ ?

ವೃತ್ತಾಂತ ಸಂಗ್ರಹ

ವಿಮಾನ ಅನಾಹುತವೊಂದರಲ್ಲಿ ಸುಭಾಷ್ ಬೋಸರು ಗಾಯಗೊಂಡು ಆಸ್ಪತ್ರೆಯಲ್ಲಿ ಸತ್ತರೆಂದು ಜಪಾನ್ ನ್ಯೂಸ್ ಏಜನ್ಸಿ ವರದಿಮಾಡಿದೆ.

ರ ಂ

ಸುಣ್ಣಕಲ್ಲು ಅಭಾವದಿಂದ ಭದ್ರಾವತಿ ಪೇಪರ್ ಕಾರ್ಖಾನೆ ತಾತ್ಕಾಲಿಕವಾಗಿ ಬಂದಾಗಿದೆ.

ಂ ಂ

ಕಾಂಗ್ರೆಸ್ ಮೇಲಿನ ಪ್ರತಿಬಂಧಕಾಜ್ಞೆ ಅನೇಕ ಕಡೆ ನಜವಾಗಿರುವುದು.

ಂ ಂ

ಭಾರತದ ಯುದ್ಧ ಖರ್ಚು ಒಟ್ಟು ರೂ. ೨೭೨೨ ಕೋಟಿ ಗಳಾಗಿವೆ.

ಂ ಂ

ನವೆಂಬರ್ ತಿಂಗಳ ಅಂತ್ಯದಲ್ಲಿ ಗಾಂಧೀಜೀ ಬಂಗಾಳಕ್ಕೆ ಭೇಟಿ ಕೊಡುವರು.

ಂ ಂ

ಮುಂದಿನ ಮಾಹೆ ೧ ರಿಂದ ಫಿಲಿಫೈನ್ಸಿನಲ್ಲಿ ಸಿವಿಲ್ ಆಡಳಿತ ನಡೆಯುವುದು.

ಂ ಂ

ಎಡಪೇ ವೇಳೆಯೂ ಸುಭಾಷಚಂದ್ರ ಬೋಸರ ಮನೆ ಹರಾಜುಹಾಕಲು, ಯಾವ ಬಿಡ್ಡುದಾರರೂ ಕೊಳ್ಳಲು ಬರಲಿಲ್ಲ.

ಂ ಂ

ಆಟಂ ಬಾಂಬಿಗೆ ಬಲಿ

ಆಟಾಮಿಕ್ ಬಾಂಬ್ ಹಾವಳಿಯಿಂದ ಸುನಾರು ೫ ಲಕ್ಷದವರೆವಿಗೆ ಪ್ರಾಣ ನೋವುಗಳುಂಟಾಗಿವೆ.

ಸಾವರ್ಕರರಿಗೆ ನಿಧಿ ಅರ್ಪಣೆ

ಗಿರಿಣಿಯ ಪ್ರತಿನಿಧಿಯಾದ ಸೇಠ್ ಹರಿದಾಸ್ ಆಚಾರತ್ಲಾಲ'ರವರ ಅಧ್ಯಕ್ಷತೆಯಲ್ಲಿ, ಅಹಮದಾಬಾದಿನ ಗುಜರಾತಿ ಕ್ಲಬ್ಬಿನವರು ಮೊನ್ನೆಯ ದಿವಸ ಸಂಜೆ ಶ್ರೀ ಸಾವರ್ಕರರಿಗೂ ಮತ್ತು ಡಾ | ಶ್ಯಾಮಪ್ರಸಾದ ಮುಖರ್ಜಿರವರಿಗೂ ಸ್ವಾಗತವನ್ನೇರ್ಪಡಿಸಿ, 11111 ರೂ. ಗಳ ನಿಧಿಯನ್ನು ಸಾವರ್ಕರರಿಗೆ ಅರ್ಪಿಸಿದರು. ಈ ಸಂದರ್ಭದಲ್ಲಿ 12 ಮಂದಿ ಮಹಮದೀಯರು ಸಭಾತ್ಯಾಗ ಮಾಡಿದರು.

ಂ ಂ

ಜುಲ್ಮಾನೆ

ಮದ್ರಾಸಿನ ಛೀಫ್ ಪ್ರೆಸಿಡೆನ್ಸಿ ನ್ಯಾಯಾಧೀಶ ಆಲ್ಲಿನ ಪತ್ರಿಕೆ ' ದಿನಚರಿ ' ಯ ಪ್ರಕಟಣಕಾರರೂ, ಮುದ್ರಣಕಾರರೂ ಆದ ಜೊಕ್ಕಲಿಂಗಂ ಎಂಬವರಿಗೆ ಕಾಗದದ ಹತೋಟಿಪೂಜ್ಞೆಯನ್ನು ವಿರುದ ನಿಮಿತ್ತ ರೂ. ೨೦೦ ಜುಲ್ಮಾನೆಯನ್ನು ವಿಧಿಸಿದರು. ಅಪೀಲು ಮಾಡಲಾಗಿ ಜುಲ್ಮಾನೆ ೧ ರೂ ಆಯಿತು.

ರಿ ಂ

ಅಖಿಲ ಭಾರತ ಕಾಂಗ್ರೆಸ್ ಸಭೆ

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಪ್ರತಿಬಂಧಕಾಜ್ಞೆಯೇನಾದರೂ ಪಜವಾದರೆ ಸೆಪ್ಟಂಬರ್ ೧೫—೨೦ ನೇ ತಾರೀಖು ನಡೆಯಬಹುದೆಂದು ಶ್ರೀನಗರದ ಸುದ್ದಿಯೊಂದು ತಿಳಿಸುತ್ತದೆ.

ಜಪಾನ್ ಮಂತ್ರಿ ಹೇಳಿಕೆ

ನ್ಯೂಯಾರ್ಕ್ ಆ 20 — ಜಪಾನು ಈಗ ಒಂದು ಸೋತ ಜನಾಂಗವಾಗಿದೆ. ಆದು ಸ್ಥಿತಿಗಳು ಅಧು ಒಂದು ಶಕ್ತಿಯ ತ ವಿ.ಲಿಟರಿ ಮತ್ತ ಹಣಕಾಸಿನ ಸ್ಥಿತಿಯಲ್ಲಿ ಶಕ್ತಿಯುತವಾಗಿದ್ದ ಕಾಲಕ್ಕಿಂತ ಬದಲಾವಣೆ ಹೊಂದಿದೆಯೆಂದು ಪತ್ರಿಕಾ ಸಮ್ಮೇಳನದಲ್ಲಿ ಜಪಾನ್ ನ್ಯಾಯಮಂತಿ ತಿಳಿಸಿರುವುದಾಗಿ ಡೊಮಯಿ ವಾರ್ತಾ ಸಂಸ್ಥೆ ತಿಳಿಸಿದೆ.

ಸಿನಿಮಾ ಫ್ರೇಷಿ ಲೀಗ್

ಸಿನಿಮಾ ಪ್ರೇಮಿಗಳ ಸಂಘಗಳು ಹಲವು ಕಡೆಗಳಲ್ಲಿ ತಲೆಯೆತ್ತಿದ ಸಂದ್ಧಿಯಸ್ಸು ನಾವು ಈ ಮೊದಲು ಹಲವು ಬಾರಿ ಕೇಳಿದ್ದೇವೆ. ಆದರೆ ಸಿನಿಮಾ ವಿರೋಧಿಗಳ ಸಂಘವೊಂದು ಬಹಿನೆಯಾಗಿದೆಯೆಂದು ಇದೀಗ ಮೊದಲು ಬಾರಿ ಕೇಳುವುದಾಗಿದೆ. ಬಾನ್ಸ್ಟು ಎಂಬಲ್ಲಿ ಖಾಲ್ಸಾ ಹೈ ಸ್ಕೂಲಿನ ವಿದ್ಯಾರ್ಥಿಗಳು ಅಂತಹ ಸಂಘವೊಂದನ್ನು ಏರ್ಪಡಿಸಿದ್ದಾರೆ. ಸಿನಿಮಾಗಳು ವಿದ್ಯಾರ್ಥಿಗಳ ಮೇಲೆ ಕೆಟ್ಟ ಪರಿಣಾಮ ತನ್ನಿಟ್ಟು ಮಾಡುತ್ತವೆ ಆದುದರಿಂದ ಅವುಗಳನ್ನು ಬಹಿಷ್ಕರಿಸ ಬೇಕು ಎಂಬುದು ಹೊಸ ಸಂಘದ ಪ್ರಚಾರ.

ನೂಲುವುದರಿಂದ ಸ್ವಾತಂತ್ರ್ಯ

ನೂಲಬೇಕು. ನೂಲಿನ ಮೇಲೆ ಹೊಂದಿಕೊಂಡಿದೆ ಸ್ವರಾಜ್ಯ. ಭಾರತದಲ್ಲೆಲ್ಲೂ ನೂಲುವ ಕಾರ್ಯಕ್ರಮ ಕೈಗೊಂಡು ನಸ್ತ ಲ್ಲಿಗೆ ಬಂದರೆ ನಾನು ಆ ಮಾಗೆ ಸ್ವರಾಜ್ಯ ಕೊಡುವೆ. ಭಾರತದಲ್ಲಿ ೪೦ ಕೋಟಿ ಪ್ರಜೆಗಳಿದ್ದಾರೆ. ಅವರಲ್ಲಿ ಚಿಕ್ಕ ಮಕ್ಕಳನ್ನು ಬಿಟ್ಟು ಇತರರೆಲ್ಲರೂ ನೂಲುವ ಕಾರ್ಯಕ್ರಮ ಕೈಗೊಂಡರೆ ಅದೊಂದು ಮಹತ್ವದ ಸಾಧನೆಯೆ ನಿಸುವುದು. ಆದುದರಿಂದಲೆ ನಾನು ನೂಲಬೇಕೆಂದು ಎಲ್ಲರನ್ನು ಒತ್ತಾಸೆ ಪಡಿಸುತ್ತೇನೆ. ನೂಲುವುದೆಂದರೆ ಅಲ್ಪ ಕಾರ್ಯವಲ್ಲ. ಸ್ವಾತಂತ್ರ ಸಂಗ್ರಾಮಕ್ಕೆ ನನ್ನ ಸಂದೇಶವಿಷ್ಟೆ ನಾನು ವಿನೋದ ಮಾಡುವೆನೆಂದು ಎಣಿಸಬೇಡಿ. ನೂಲುವುದರಲ್ಲಿ ಸಂಪೂರ್ಣ ಶಕ್ತಿಯೊಂದು ಅಡಕವಾಗಿದೆ '— ಹೀಗೆಂದು ಗಾಂಧೀಜೀಯವರು ಅಖಿಲ ಭಾರತ ಚರಖಾ ಸಂಘಕ್ಕೆ ಸ್ವಾತಂತ್ರ್ಯ ಸಪ್ತಾಹದ ಸಂದೇಶ ಕಳಿಸಿರುವರು.

ಸತ್ಯವಾದಿ
ದಿನಪತ್ರಿಕೆ
ಕನ್ನಡದಲ್ಲಿ — ತಿಂಗಳಿಗೆ ೬ ಆಣೆ
ಕೂಡಲೇ ಚಂದಾದಾರರಾಗಿ

ಜಪಾನ್ ವೈಲೆ ಬ್ರಿಟಿಷ್ ವಿಮಾನ ಧಾಳಿ

17—8—45 ರಿಂದ
At Ranjit
DUKH-SUKH
ರಣಜಿತ್ ಟಾಕೀಸಿನಲ್ಲಿ
ಸಿತಾರ — ರಾಮಮೂರ್ತಿ — ವಾಸಂತಿ
ಪಾತ್ರವಹಿಸಿರುವ
ದುಖ್-ಸುಖ್
(ಹಿಂದಿ)
ಪ್ರತಿ ದಿನ ೩ ಆಟಗಳು

For Good Printing—
L. N. Press
Sriramp et MYSORE

TALK-A-TONE
(Pioneer Film-mag of S. India)
Local Agent—D. Mahadev
Opera Talkies, Mysore

Edited, Printed and published by M. S. Krishna Rao, at the Satvavadi Press, Chamaraja Agrahar, Mysore.

ರಕ್ತ ವೃದ್ಧಿಗೆ — ಧಾತುಪುಷ್ಟಿಗೆ
ಶಕ್ತಿಸುಧಾ
ಸೇವನೆಯೇ ಸುಲಭೋಪಾಯ
ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ.
ಶಕ್ತಿಸುಧಾ, ಗಂಟೆ ಚಾಮರಾಜಪುರಂ ಮೈಸೂರು.

AT Opera— From 22—8—45
BROTHERHOOD
.... ಆಪೇರಾ ಟಾಕೀಸ್‌ನಲ್ಲಿ ....
ಭಾರತಭೂಷಣ, ರಾಯ್‌ಮೋಹನ್, ಮಹಮದ್ ಹಾದಿ,
ಸುನಿತ್ರ, ಬಿಕ್ ಪಾಲ್ ಪಾತ್ರವಹಿಸಿರುವ
ಭಾಯ್‌ಚಾರ
(ಉರ್ದು)